ಐ.ಎಂ.ಎ. ಅನುಮತಿ ಇಲ್ಲದೆ ಪ್ರಾರಂಭವಾಗಿರುವ ವೈದ್ಯಕೀಯ ಕಾಲೇಜುಗಳ ಬಗ್ಗೆ

456 (3838) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಐ.ಎಂ.ಎ. ಅನುಮತಿ ಇಲ್ಲದೆ ಎಷ್ಟು ಮೆಡಿಕಲ್, ದಂತ ಮತ್ತು ಫಾರ್ಮಸಿ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ; ಅವು ಯಾವುವು;

ಆ) ಈ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ಇವರು ಪಡೆಯುವ ಪದವಿಗೆ ಮಾನ್ಯತೆ ಇದೆಯೇ; ಇಲ್ಲದಿದ್ದಲ್ಲಿ ಈ ನ್ಯೂನತೆ ಸರಿಪಡಿಸಲು ತೆಗೆದುಕೊಂಡಿರುವ ಕ್ರಮವೇನು;

ಈ) ಐ.ಎಂ.ಎ. ಅನುಮತಿ ಇಲ್ಲದೆ ಮೆಡಿಕಲ್ ದಂತ ಮತ್ತು ಫಾರ್ಮಸಿ ಕಾಲೇಜುಗಳನ್ನು ಪ್ರಾರಂಭಿಸುವುದು ಕಾನೂನು ಪ್ರಕಾರ ಸರಿಯೇ?

ಡಾ॥ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಮೆಡಿಕಲ್, ದಂತ ಮತ್ತು ಫಾರ್ಮಸಿ ಕಾಲೇಜುಗಳನ್ನು ಪ್ರಾರಂಭಿಸಲು ಐ.ಎಂ.ಎ. ಇವರ ಅನುಮತಿ ಅಗತ್ಯವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಎ.ಎಸ್. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯಲ್ಲಿ ಸ್ವಲ್ಪ ಗಡಿಬಿಡಿಯಾಗಿದೆ. ಅದು ಹೇಗೆ ಎಂದರೆ, ನಾನು Indian Medical Council (I.M.C.) ಎಂದು ಕೇಳಿದ್ದೇನೇ ಹೊರತು I.M.A. ಎಂದಲ್ಲ. I.M.A. is only an association of physicians or doctors. Indian Medical Councilನಿಂದ ಮೆಡಿಕಲ್, ದಂತ ಮತ್ತು ಫಾರ್ಮಸಿ ಕಾಲೇಜ್‌ಗಳನ್ನು ಪ್ರಾರಂಭಿಸಲು ಅನುಮತಿಯನ್ನು ಪಡೆಯುವ ಬಗ್ಗೆ ನಾನು ಮೂಲ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ ಇಲ್ಲೇನೋ I.M.A. ಎಂದು ಬಂದು ಬಿಟ್ಟಿದೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಇದನ್ನು ಅಮೆಂಡ್ ಮಾಡಿಕೊಂಡು, ತಪ್ಪಾಗಿರುವುದನ್ನು ಸರಿಪಡಿಸಿಕೊಂಡು ಉತ್ತರಿಸಬೇಕೆಂದು ಕೋರುತ್ತೇನೆ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. Question Branch ನಲ್ಲಿ ಏನೋ ರೋಗ ಹತ್ತಿಕೊಂಡು ಬಿಟ್ಟಿದೆ. ನನ್ನ ಬಹಳಷ್ಟು questionsಗೆ ಉತ್ತರವೇ ಬರುವುದಿಲ್ಲ. Report, Report ಎಂದು ಬರೆದು ಬಿಡುತ್ತಾರೆ. ಮಾತೆತ್ತಿದರೆ ನನ್ನ ಪ್ರಶ್ನೆಗೆ Report ಎಂದು ಬಿಡುತ್ತಾರೆ. ಏಕೆ ನನ್ನ ಪ್ರಶ್ನೆಗೆ ಈ ಗೋಳು? This matter has to be enquired into. ಅದು ಒಂದು ಕಡೆ ಇರಲಿ ಸಾರ್. ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಇಲ್ಲಿ Indian Medical Association ಎಂದಿರುವುದು ತಪ್ಪು. ಅದು Indian Medical Council ಎಂದಾಗಬೇಕಾಗಿತ್ತು. All Indian levelನಲ್ಲಿ....

ಅಧ್ಯಕ್ಷರು: ತಾವು ಪ್ರಶ್ನೆ ಕೇಳಿ.

ಶ್ರೀ ಎ.ಎಸ್. ಗುರುಸ್ವಾಮಿ: ತಪ್ಪಾಗಿರುವ ಬಗೆಗಿನ ಕರೆಕ್ಷನ್ ಅನ್ನು ನಾನಿಲ್ಲಿ ಹೇಳಿ ಬಿಡುತ್ತೇನೆ. ಆದ್ದರಿಂದ ಈ Indian Medical Councilನಿಂದ ಅನುಮತಿ ಪಡೆಯದೇ ಇರತಕ್ಕಂಥ ಮೆಡಿಕಲ್, ದಂತ ಮತ್ತು ಫಾರ್ಮಸಿ ಕಾಲೇಜ್‌ಗಳೆಷ್ಟು ಎನ್ನುವುದು ನನ್ನ ಮೊದಲನೇ

ಪ್ರಶ್ನೆಯಾಗಿದೆ. ಹೀಗೆ un-recognised ಕಾಲೇಜ್‌ಗಳಲ್ಲಿ ಓದುತ್ತಿರತಕ್ಕಂಥ ವಿದ್ಯಾರ್ಥಿಗಳು ಎಷ್ಟು ಎಂಬ ನನ್ನ ಪ್ರಶ್ನೆಗೆ ಮಾನ್ಯ ಸಚಿವರು 'ಉದ್ಭವಿಸುವುದಿಲ್ಲ' ಎಂದು ಉತ್ತರಿಸಿದ್ದಾರೆ. ಇಂತಹ ವಿದ್ಯಾರ್ಥಿಗಳು ಪಡೆದಂತಹ ಪದವಿಗೆ ಮಾನ್ಯತೆ ಸಿಕ್ಕಿದೆಯೇ ಇಲ್ಲವೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೂ ಕೂಡ ಮಾನ್ಯ ಸಚಿವರು 'ಉದ್ಭವಿಸುವುದಿಲ್ಲ' ಎನ್ನುವಂತಹ ಉತ್ತರವನ್ನು ಹೇಳಿದ್ದಾರೆ. ಇದು ಸರಿಯಲ್ಲ. ಇಂತಹ ಕಾಲೇಜ್‌ಗಳಲ್ಲಿ ಓದಿದಂತಹ ವಿದ್ಯಾರ್ಥಿಗಳು ನನಗೆ ತಿಳಿದಂತೆ ಅನೇಕ ಜನ Institution ಮೇಲೆ ಮತ್ತು Government ಮೇಲೆ case ಹಾಕಿ ಕೋರ್ಟ್ ಮೆಟ್ಟಿಲನ್ನು ಹತ್ತಿದ್ದಾರೆ. ಸುಪ್ರೀಂ ಕೋರ್ಟ್‌ನಿಂದ ಒಂದು ರೂಲಿಂಗ್ ಬಂದಿದೆ. ಈ ರೀತಿ Institutions ನಡೆಯುತ್ತಿರುವುದು illegal ಎಂದು ಒಂದು ರೂಲಿಂಗ್ ಆಗಿದೆ. ಆ ರೂಲಿಂಗ್ ಏನು ಎನ್ನುವುದನ್ನು ದಯಮಾಡಿ ಆ ವಿದ್ಯಾರ್ಥಿಗಳಿಗೆ ಮತ್ತು ಜನತೆಗೆ ಗೊತ್ತಾಗುವ ರೀತಿಯಲ್ಲಿ ತಿಳಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ಸಚಿವರನ್ನು ಕೋರುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ನನಗೆ ಆಶ್ಚರ್ಯವೆನಿಸುತ್ತದೆ. My learned friend Mr. Guruswamy has missed the bus. He has to catch the right bus-stand and arrive at right destination. ಅವರು I.M.A. ಅಂದರೆ Indian Medical Association ಬಗ್ಗೆ ಕೇಳಿದ್ದಾರೆ. The question is very clear. ಆದ್ದರಿಂದ ಅದಕ್ಕೆ ಹೊಂದಿಕೊಂಡಂತೆ ನಾನು ಇಲ್ಲೆ ಉತ್ತರಗಳನ್ನು ಕೊಟ್ಟಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮ ಸಿಬ್ಬಂದಿ ಸುಮ್ಮನೆ ಶಾಸಕರದ್ದು ತಪ್ಪು ಹುಡುಕುವುದು ಬೇಡ. ಅವರ ಉದ್ದೇಶ ಅಥವಾ ಭಾವನೆ ಏನಿದೆ ಎಂಬುದು ನಿಮಗೂ ತಿಳಿಯುತ್ತದೆ. ಅದಕ್ಕೆ ಉತ್ತರ ಕೊಡುವುದನ್ನು ಕಲಿಯಿರಿ. ಏನೋ ಒಂದು ದೊಡ್ಡ ತಪ್ಪಾಗಿದೆ ಎಂದು ಅದನ್ನೇ ಹಿಡಿದುಕೊಂಡು 'ಉದ್ಭವಿಸುವುದಿಲ್ಲ' 'ಉದ್ಭವಿಸುವುದಿಲ್ಲ' ಎಂದು ಉತ್ತರ ಕೊಟ್ಟರೆ ಹೇಗೆ? ಮಾನ್ಯ ಅಧ್ಯಕ್ಷರೇ, ಅದಕ್ಕೆ I.M.A. ಸವರು ಪರ್ಮಿಷನ್ ಕೊಡುತ್ತಾರೆಯೇ ಎಂಬುದನ್ನು ನೀವೇ ಹೇಳಿ. ಶಾಸಕರದ್ದು ತಪ್ಪು ಆಗಿರಬಹುದು. ಅವರು ಅದನ್ನು ಒಪ್ಪಿಕೊಂಡರು. ಬರೆಯುವಾಗ ತಪ್ಪುಗಳಾಗುತ್ತವೆ. ಆದರೆ ಅವರು ಯಾವ ಉದ್ದೇಶದಿಂದ ಕೇಳಿದ್ದಾರೋ, ಆ ಉದ್ದೇಶದಿಂದ ಮಾನ್ಯ ಸಚಿವರು ಉತ್ತರ ಕೊಡುವುದನ್ನು ಬಿಟ್ಟು ಟೆಕ್ನಿಕಲ್ ತಪ್ಪು ಹುಡುಕಿ ಆ ರೀತಿ ಉತ್ತರ ಹೇಳುವುದು ಸರಿಯಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆಯನ್ನು ತಾವು ಪುರಸ್ಕರಿಸಿದರೆ ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ. ಆದರೆ ಅವರು ಪ್ರಶ್ನೆ ಕೇಳಿದ್ದು I.M.A. ಬಗ್ಗೆ.

ಅಧ್ಯಕ್ಷರು: ಮಾನ್ಯ ಗುರುಸ್ವಾಮಿಯವರೇ, next supplementary ಏನಾದರೂ ಇದ್ದರೆ ಹೇಳಿ.

ಶ್ರೀ ಎ.ಎಸ್. ಗುರುಸ್ವಾಮಿ: ನಾನು Indian Medical Council ಎಂದೇ ಪ್ರಶ್ನೆಯನ್ನು ಕೇಳಿದ್ದೇನೆ. ಅದು ಹೇಗೋ I.M.A. ಎಂದು ಆಗಿದೆ. ನನಗೇನು ಅದರ ಬಗ್ಗೆ ಗೊತ್ತಿಲ್ಲವೇ? ಅದರ ಬಗ್ಗೆ minimum knowledge ಇಲ್ಲವೇ? I.M.A. is nothing but an Association of Doctors. ಅದಕ್ಕೂ ಮೆಡಿಕಲ್ ಕಾಲೇಜಿಗೂ ಸಂಬಂಧವೇ ಇಲ್ಲ. My

original thinking is, ಆ All India Medical Council ಪ್ರಕಾರವೇ ನೀವು recognition ಪಡೆದು, ಅನುಮತಿ ಪಡೆದಿರುವ ಕಾಲೇಜ್‌ಗಳ ಬಗ್ಗೆಯೇ ನಾನು ಕೇಳಿದ್ದು. ಅದನ್ನು ನೀವು I.M.A. ಎಂದು convert ಮಾಡಿದ್ದೀರಿ. ಇವತ್ತು ತಮ್ಮಲ್ಲಿ ಆ ಬಗ್ಗೆ ಉತ್ತರ ಸಿದ್ಧವಿಲ್ಲ ಎನ್ನುವುದಾದರೆ, ಮಾನ್ಯ ಸಚಿವರು ಆಮೇಲಾದರೂ ಆ ಬಗ್ಗೆ ಉತ್ತರವನ್ನು ನನಗೆ ಕಳುಹಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರ ಬಳಿ ಉತ್ತರ ಈಗಲೇ ಇದ್ದರೆ ಅದನ್ನು ಕೊಡಲಿ.

ಡಾ॥ ಎ.ಬಿ. ಮಾಲಕರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಮ್ಮ thinkingನಲ್ಲಿ ಫಸ್ಟ್ ಅದೇ ಇತ್ತು ಎಂದು ಹೇಳಿದರು. But, If his thinking has not been transferred into words, Then What we can do? ಏನೂ ಮಾಡುವುದಕ್ಕಾಗುವುದಿಲ್ಲ. ಆದರೂ ಕೂಡ ತಮ್ಮ ಸಾಮಾನ್ಯ ಮಾಹಿತಿಗಾಗಿ ಕೆಲವೊಂದು ವಿಚಾರಗಳನ್ನು ಹೇಳುತ್ತೇನೆ. ಮೆಡಿಕಲ್ ಕಾಲೇಜ್‌ಗಳನ್ನು ಪ್ರಾರಂಭ ಮಾಡಬೇಕಾದರೆ, 1991ನೇ ಇಸವಿಯಿಂದ, Indian Medical Council (I.M.C.) ಅದು, It is not I.M.A., State Government ನಿಂದ Essentiality Certificate, Indian Medical Council ಗೆ ಹೋಗಬೇಕು. Indian Medical Councilನವರು ಇದು ಯೋಗ್ಯ ಅಥವಾ ಸೂಕ್ತ ಎಂದು ಕಂಡಾಗ Central Governmentಗೆ ಕಳುಹಿಸುತ್ತಾರೆ. Central Government I.M.C. ಶಿಫಾರಸ್ಸಿನ ಆಧಾರದ ಮೇಲೆ ಅದಕ್ಕೆ ಅನುಮತಿಯನ್ನು ಕೊಡುತ್ತಾರೆ. ಅದೇ ರೀತಿಯಲ್ಲಿ ಡೆಂಟಲ್ ಕಾಲೇಜ್ ಆಗಿದ್ದರೆ, concerned State Governments will give Essentiality Certificate to the applicant. With the recommendations it will go to the Dental Council of India and Dental Councilನವರು ಆ ಬಗ್ಗೆ Government of India ಗೆ ಶಿಫಾರಸ್ಸು ಮಾಡುತ್ತಾರೆ. ಆಮೇಲೆ Government of India ದವರು ಅನುಮತಿಯನ್ನು ಕೊಡುತ್ತಾರೆ. ಅದೇ ರೀತಿಯಲ್ಲಿ ಫಾರ್ಮಸಿ ಕಾಲೇಜ್ ಆಗಿದ್ದರೆ, ಇದೇ procedure ಅದಕ್ಕೂ ಕೂಡ apply ಆಗುತ್ತದೆ.

ಅಧ್ಯಕ್ಷರು: ಇದೇ last supplementary.

ಶ್ರೀ ಎ.ಎಸ್. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದು, ಈ ರೀತಿ Indian Medical Councilನ ಅನುಮತಿ ಇಲ್ಲದಿರತಕ್ಕಂಥ ಕಾಲೇಜ್‌ಗಳೆಷ್ಟು? ಅವು ಯಾವುವು? ಎಷ್ಟು ಜನ ವಿದ್ಯಾರ್ಥಿಗಳು ಅವುಗಳಲ್ಲಿ ಸೇರಿಕೊಂಡಿದ್ದಾರೆ? ಅವರ ಭವಿಷ್ಯ ಏನು? ಅವರು ಕೋರ್ಟಿಗೆ ಹೋದಾಗ ಕೋರ್ಟಿನಿಂದ ಒಂದು ರೂಲಿಂಗ್ ಬಂದಿದೆ, ಅದು ಏನು ಎಂಬುದು ನನ್ನ ಪ್ರಶ್ನೆ. ಮಾನ್ಯ ಸಚಿವರು ಕಾಲೇಜ್‌ಗಳನ್ನು ಆರಂಭಿಸುವ procedureಗಳನ್ನು ಹೇಳುತ್ತಿದ್ದಾರೆ. ಮಾನ್ಯ ಸಚಿವರು ದಯಮಾಡಿ ನನ್ನ ಆ pointsಗಳಿಗೆ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಅನುಮತಿ ಇಲ್ಲದೆಯೇ ಯಾರೂ ಕೂಡ ಕಾಲೇಜ್‌ಗಳನ್ನು ನಡೆಸುವಂತಿಲ್ಲ. ಆದರೂ ಕೂಡ ಚಿತ್ರದುರ್ಗದ ಜಗದ್ಗುರುಗಳ ಮೆಡಿಕಲ್ ಕಾಲೇಜ್, ಗುಲ್ಬರ್ಗಾದಲ್ಲಿನ ಬಂದೇನವಾಜ್ ಮೆಡಿಕಲ್ ಕಾಲೇಜ್ ಮತ್ತು ಬೆಂಗಳೂರಿನಲ್ಲಿನ ಎಂ.ವಿ.ಜೆ. ಕಾಲೇಜ್, ಈ ಮೂರು ಕಾಲೇಜ್‌ಗಳಿಗೆ ಹೋದ ಸಲ ಅನುಮತಿ ಬರಲಿಲ್ಲ. ಹೊಸದಾಗಿ ಪ್ರಾರಂಭ

ಮಾಡಿದ ಕಾಲೇಜ್‌ಗಳಿಗೆ ನಾಲ್ಕು ವರ್ಷ ಸತತವಾಗಿ ನವೀಕರಣ ಆಗ ಬೇಕಾಗುತ್ತದೆ. ಹೊಸದಾಗಿ ಪ್ರಾರಂಭ ಮಾಡಿದ ಕಾಲೇಜ್‌ಗಳಿಗೆ ಅನುಮತಿ renewal ಆಗಬೇಕಾಗುತ್ತದೆ. ಮೊದಲನೇ ವರ್ಷ ಈ ಮೂರು ಕಾಲೇಜ್‌ಗಳ ಸೊಸೈಟಿಗಳಿಗೆ ಅನುಮತಿ ಸಿಕ್ಕಿತ್ತು. ಆದರೆ ಎರಡನೇ ವರ್ಷ ಅನುಮತಿ ಸಿಗಲಿಲ್ಲ. ಅಂದರೆ ಅನುಮತಿ ನವೀಕರಣ ಆಗಲಿಲ್ಲ. ಹೀಗಾಗಿ Indian Medical Council did not recommended to the Central Government; Central government in turn did not clear the permission for these threee colleges. However, these three colleges approached the High Court. On the direction of the High Court to Government, they have admitted the students.

ಶ್ರೀ ಎ.ಎಸ್. ಗುರುಸ್ವಾಮಿ: ಈ ವಿದ್ಯಾರ್ಥಿಗಳು ಏನು ಸೇರಿಸಿಕೊಂಡಿದ್ದಾರಲ್ಲಾ, ಅವರು ಪಡೆದಂತಹ ಡಿಗ್ರಿ ಅಥವಾ ಕೋರ್ಸಿಗೆ as on today ಇರುವ legal status ಏನು? I have joined the college ಎಂದಿಟ್ಟುಕೊಳ್ಳಿ. ಅದಕ್ಕೆ ಇರುವ legal status ಏನು? Am I permitted to go abroad with that legal degree? Am I permitted to go for a Post-Graduates degree? ಮಾನ್ಯ ಸಚಿವರು ದಯಮಾಡಿ ಆ ಬಗ್ಗೆ ಹೇಳಬೇಕು. ಅದು ಕಾನೂನು ಬದ್ಧವೇ ಇಲ್ಲವೆ ಎಂಬುದನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಿ ಹೇಳಬೇಕು.

ಡಾ॥ ಎ.ಬಿ. ಮಾಲಕರೆಡ್ಡಿ: ಆ ಪ್ರಶ್ನೆ ಉದ್ಭವಿಸುವುದಿಲ್ಲ. The career of the students will not be jeopardy. Suppose, this year also, if these colleges are not cleared and next year also, these colleges are not cleared, the Government will repatriate these students to other colleges. That question does not arise.

ಅಧ್ಯಕ್ಷರು: ಮಾನ್ಯ ಶಿವಶಂಕರ ರೆಡ್ಡಿಯವರೇ, ತಮ್ಮ ಪ್ರಶ್ನೆ ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ಅವರು ಉತ್ತರ ಕೊಡಬಹುದೇನೋ?

ಅಧ್ಯಕ್ಷರು: ನಗರಾಭಿವೃದ್ಧಿ ಇಲಾಖೆಯವರು ಉತ್ತರ ಕೊಡುವುದಿದ್ದರೆ ಇವತ್ತೇ ಕೊಡಲಿ. I have no objection. ನಿಮ್ಮ ಪ್ರಶ್ನೆಯೇನೂ ಲ್ಯಾಪ್ಸ್ ಆಗುವುದಿಲ್ಲ. ಅದು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ಅದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

12.10 ಪಿ.ಎಂ.

ಅಧ್ಯಕ್ಷರು: ಮಾನ್ಯ ಚಂದ್ರಕಾಂತ ಬೆಲ್ಲದ್ ಮಾನ್ಯ ಪೂಜಾರ್ ಹಾಗೂ ಮಾನ್ಯ ಶಾಸಕ ಲಿಂಗೇಗೌಡರು, ಇಬ್ಬರೂ ಒಟ್ಟಿಗೆ ತಮ್ಮ ಪ್ರಶ್ನೆಗಳನ್ನು ಕೇಳಿ.

ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕೊಠಡಿಗಳ ಕೊರತೆ

458 (4082) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮತ್ತು ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?